# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ ರಾಜ್ಯದಲ್ಲಿ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸಿದ್ದು, ಇವುಗಳ ಕಾರ್ಯನಿರ್ವಹಣೆಯ ಕಾಲಾವಧಿಯನ್ನು ಮುಂದುವರಿಸುವ ಹಾಗೂ ನಿರ್ವಹಣೆಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :

1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 28 ಇಕಾಅ 2012, ದಿನಾಂಕ:28/03/2012.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 119 ನಾಸೇಖಾ 2012, ದಿನಾಂಕ: 29/11/2012.
3. ಸರ್ಕಾರದ ಆದೇಶ ಸಂಖ್ಯೆ: 80 ಇಕಾಅ 2012 (ಭಾಗ-1), ದಿನಾಂಕ: 26/4/2012.
4. ಆರ್ಥಿಕ ಇಲಾಖೆಯ ಇ-ಮೈಲ್ ಸಂದೇಶದ ದಿನಾಂಕ: 03/03/2013.
5. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 196 ನಾಸೇಖಾ 2012/ಪಿ2, ದಿನಾಂಕ: 13/3/2013.
6. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 79 ವೆಚ್ಚ-12/2013, ದಿನಾಂಕ: 18/3/2013.

ಪ್ರಸ್ತಾವನೆ :

ಮೇಲೆ ಓದಲಾದ (1) ರ ಅಧಿಸೂಚನೆಯಲ್ಲಿ ರಾಜ್ಯ ಸರ್ಕಾರವು 11 ಇಲಾಖೆಗಳ ಮುಖಾಂತರ 151 ಕಾಲಮಿತಿ ಸೇವೆಗಳನ್ನು ಕರ್ನಾಟಕ ನಾಗರೀಕರಿಗೆ ಒದಗಿಸಲು ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ 2011 ಅನ್ನು ದಿನಾಂಕ:02/04/2012 ರಿಂದ ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗಿದೆ.

ಮೇಲೆ ಓದಲಾದ(2) ರ ಅಧಿಸೂಚನೆಯಲ್ಲಿ "ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011" ರ ಸಂಬಂಧ ಸರ್ಕಾರದ ಕ್ರಮಾಂಕ: ಸಿಆಸುಇ 119 ನಾಸೇಖಾ 2012, ದಿನಾಂಕ: 26/10/2012 ರ ಅಧಿಸೂಚನೆ-1 ರ ತಿದ್ದುಪಡಿ ಅಧಿಸೂಚನೆಯಲ್ಲಿ ಸೇರಿಸಿರುವ ಹೆಚ್ಚುವರಿ ಸೇವೆಗಳಲ್ಲಿ 12 ಇಲಾಖೆಗಳ 93 ಹೆಚ್ಚುವರಿ ಸೇವೆಗಳನ್ನು ಹಾಗೂ ಸಿಬ್ಬಂದಿ ಕಲ್ಯಾಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ 21 ಸೇವೆಗಳನ್ನು ದಿನಾಂಕ: 3ನೇ ಡಿಸೆಂಬರ್ 2012 ರಿಂದ ರಾಜ್ಯದಾದ್ಯಂತ ಜಾರಿಗೆ ಬರುವಂತೆ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಮೇಲೆ ಓದಲಾದ (3) ರ ಸರ್ಕಾರದ ಆದೇಶದಲ್ಲಿ 176 ತಾಲ್ಲೂಕು ಮತ್ತು 30 ಜಿಲ್ಲಾ ಕೇಂದ್ರಗಳಲ್ಲಿ ತಲಾ ಒಂದೊಂದು ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸಲು ಪೀಠೋಪಕರಣಗಳಿಗಾಗಿ ರೂ.10,000/- ಗಳನ್ನೊಳಗೊಂಡಂತೆ ಪ್ರತಿ ಸಹಾಯವಾಣಿ ಕೇಂದ್ರಕ್ಕೆ ರೂ.81,602/- ರಂತೆ (ಆರು ತಿಂಗಳ ಅವಧಿಗೆ ತಗಲುವ ವೆಚ್ಚ) ಒಟ್ಟಾರೆಯಾಗಿ 176 ತಾಲ್ಲೂಕು ಮತ್ತು 30 ಜಿಲ್ಲೆಗಳಿಗೆ ರೂ.1,68,10,012/-ಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಸಹಾಯವಾಣಿ ಕೇಂದ್ರಗಳನ್ನು ನಿರ್ವಹಿಸಲು ನೀಡಲಾಗಿದ್ದ ಆರು

ತಿಂಗಳ ಕಾಲಾವಧಿಯು ಸೆಪ್ಟೆಂಬರ್ 2012 ಕ್ಕೆ ಮುಕ್ತಾಯಗೊಂಡಿದ್ದು, ಸಹಾಯವಾಣಿ ಕೇಂದ್ರಗಳನ್ನು ನಿರ್ವಹಿಸಲು ಅಕ್ಟೋಬರ್ 2012 ರಿಂದ ಮಾರ್ಚ್ 2013 ರವರೆಗೆ 06 ತಿಂಗಳ ಅವಧಿಯನ್ನು ಮುಂದುವರೆಸುವ ಬಗ್ಗೆ ಹಾಗೂ ಈ ಆರು ತಿಂಗಳ ಅವಧಿಗಾಗಿ ಸಹಾಯವಾಣಿ ಕೇಂದ್ರಗಳ ನಿರ್ವಹಣೆಗೆ ಈ ಕೆಳಕಂಡಂತೆ ತಗಲುವ ವೆಚ್ಚವನ್ನು ಭರಿಸಲು ಸರ್ಕಾರದಲ್ಲಿ ಪರಿಶೀಲಿಸಿದೆ.

ಪ್ರತಿ ತಿಂಗಳ ಸಿಬ್ಬಂದಿ ವೇತನ ರೂ.10,000/- ಮತ್ತು ಲೇಖನ ಸಾಮಗ್ರಿಗಳಿಗಾಗಿ ರೂ.2,000/-ಗಳಾಗಿದ್ದು, ಒಟ್ಟು ರೂ.12,000/-ಗಳಾಗಿರುತ್ತದೆ. ಅದರಂತೆ ಅಕ್ಟೋಬರ್ 2012 ರಿಂದ ಮಾರ್ಚ್ 2013 ರವರೆಗೆ ಆರು ತಿಂಗಳ ಅವಧಿಗೆ ರಾಜ್ಯದ 176 ತಾಲ್ಲೂಕುಗಳಲ್ಲಿ ಪ್ರಸ್ತುತ 174 ತಾಲ್ಲೂಕು ಮತ್ತು 30 ಜಿಲ್ಲಾ ಕೇಂದ್ರಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸಿರುವ ತಿಂಗಳುಗಳಿಗನುಸಾರ ಲೆಕ್ಕಾ ಹಾಕಿ ಒಟ್ಟು 15 ಜಿಲ್ಲೆಗಳಿಗೆ ಒಟ್ಟಾರೆ ರೂ.36,45,208/-ಗಳ ವೆಚ್ಚವನ್ನು ಭರಿಸಬಹುದಾಗಿದೆ. ಅಂತೆಯೇ ರೂ.36,45,208/-(ಮೂವತ್ತಾರು ಲಕ್ಷದ ನಲವತ್ತೈದು ಸಾವಿರದ ಇನ್ನೂರ ಎಂಟು ರೂಪಾಯಿಗಳು ಮಾತ್ರ) ಗಳ ಅನುದಾನವನ್ನು "ಸಕಾಲ ಮಂಡಳಿ" ಯಿಂದ ಭರಿಸಲು ತೀರ್ಮಾನಿಸಿದೆ.

ಮೇಲೆ ಓದಲಾದ (4) ರ ಇ-ಮೈಲ್ ಸಂದೇಶದಲ್ಲಿ ಸಹಾಯವಾಣಿ ಕೇಂದ್ರಗಳನ್ನು ಮುಂದುವರೆಸುವ ಬಗ್ಗೆ ಆರ್ಥಿಕ ಇಲಾಖೆಯು ಸಹಮತಿಸಿದೆ.

ಮೇಲೆ ಓದಲಾದ (5) ರ ಸರ್ಕಾರದ ಆದೇಶದಲ್ಲಿ ರಾಜ್ಯದ 176 ತಾಲ್ಲೂಕು ಮತ್ತು 30 ಜಿಲ್ಲಾ ಕೇಂದ್ರಗಳಲ್ಲಿ ತಲಾ ಒಂದೊಂದು ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಇವುಗಳ ಕಾರ್ಯನಿರ್ವಹಣೆಯನ್ನು ಅಕ್ಟೋಬರ್ 2012 ರಿಂದ ಮಾರ್ಚ್ 2013 ರ ಅಂತ್ಯದವರೆಗೆ ಮುಂದುವರಿಸಲು ಅನುಮೋದಿಸಿದೆ.

ಮೇಲೆ ಓದಲಾದ (6) ರ ಆರ್ಥಿಕ ಇಲಾಖೆಯ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯು ಸಹಮತಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 196 ನಾಸೇಖಾ 2012,</u>

<u>ಬೆಂಗಳೂರು, ದಿನಾಂಕ: 21ನೇ ಮಾರ್ಚ್ 2013.</u>

ರಾಜ್ಯದ 176 ತಾಲ್ಲೂಕು ಮತ್ತು 30 ಜಿಲ್ಲಾ ಕೇಂದ್ರಗಳಲ್ಲಿ ಪ್ರಸ್ತುತ 30 ಜಿಲ್ಲೆ ಮತ್ತು 174 ತಾಲ್ಲೂಕುಗಳಲ್ಲಿ ತಲಾ ಒಂದೊಂದು ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಕಾರ್ಯನಿರ್ವಹಣೆಯನ್ನು ಅಕ್ಟೋಬರ್ 2012 ರಿಂದ ಮಾರ್ಚ್ 2013 ರ ಅಂತ್ಯದವರೆಗೆ ಮುಂದುವರಿಸಲು ಅನುಮೋದಿಸಿದೆ ಹಾಗೂ ಜಿಲ್ಲೆಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸಲಾದ ದಿನಾಂಕ/ತಿಂಗಳುಗಳನ್ನು ಗಣನೆಗೆ ತೆಗೆದುಕೊಂಡು, ಅದರನುಸಾರ ಈ ಕೆಳಕಂಡಂತೆ ಅನುದಾನವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

.....3

| ಕ್ರಮ ಸಂಖ್ಯೆ. | ಜಿಲ್ಲೆಗಳ ಹೆಸರು | ಜಿಲ್ಲಾ ಕೇಂದ್ರ ಮತ್ತು ತಾಲ್ಲೂಕುಗಳಲ್ಲಿ ಪ್ರಾರಂಭಿಸಬೇಕಾದ ಸಂಖ್ಯೆ | ಸಹಾಯವಾಣಿ ಕೇಂದ್ರಗಳನ್ನು ಪ್ರಾರಂಭಿಸಿರುವ ತಾಲ್ಲೂಕುಗಳ ಸಂಖ್ಯೆ | ಸಹಾಯವಾಣಿ ಕೇಂದ್ರಗಳನ್ನು ಪ್ರಾರಂಭಿಸಿರುವ ದಿನಾಂಕ | ಒಟ್ಟು ರೂ.ಗಳಲ್ಲಿ |
|---|---|---|---|---|---|
| 1 | 2 | 3 | | 4 | 5 |
| 1 | ಜಿಲ್ಲಾಧಿಕಾರಿ, ತುಮಕೂರು | 1+9 | 1+9 | 02.11.2012 | 3,60,000/- |
| 2 | ಜಿಲ್ಲಾಧಿಕಾರಿ, ಶಿವಮೊಗ್ಗ | 1+7 | 1+7 | 19.05.2012 | 4,72,355/- |
| 3 | ಜಿಲ್ಲಾಧಿಕಾರಿ, ಕೊಡಗು | 1+3 | 1+3 | 30.10.2012 | - |
| 4 | ಜಿಲ್ಲಾಧಿಕಾರಿ, ಯಾದಗಿರಿ | 1+3 | 1+3 | 02.11.2012 | - |
| 5 | ಜಿಲ್ಲಾಧಿಕಾರಿ, ಧಾರವಾಡ | 1+5 | 05 | 01.09.2012 | - |
| 6 | ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ | 1+4 | 04 | 08.02.2013 | - |
| 7 | ಜಿಲ್ಲಾಧಿಕಾರಿ, ಚಿತ್ರದುರ್ಗ | 1+6 | 1+6 | 01.06.2012 | - |
| 8 | ಜಿಲ್ಲಾಧಿಕಾರಿ, ಬಾಗಲಕೋಟೆ | 1+6 | 1+6 | 10.05.2012 | 2,45,000/- |
| 9 | ಜಿಲ್ಲಾಧಿಕಾರಿ, ಬೀದರ್ | 1+5 | 1+5 | 28.01.2013 | - |
| 10 | ಜಿಲ್ಲಾಧಿಕಾರಿ, ಕೊಪ್ಪಳ | 1+4 | 1+4 | 01.05.2012 | 3,30,005/- |
| 11 | ಜಿಲ್ಲಾಧಿಕಾರಿ, ದಾವಣಗೆರೆ | 1+6 | 1+6 | 20.06.2012 | 2,81,932/- |
| 12 | ಜಿಲ್ಲಾಧಿಕಾರಿ, ಬಿಜಾಪುರ | 1+5 | 1+5 | 01.08.2012 | 16,000/- |
| 13 | ಜಿಲ್ಲಾಧಿಕಾರಿ, ಬೆಂಗಳೂರು ನಗರ | 1+5 | 1+5 | 15.11.2012 | - |
| 14 | ಜಿಲ್ಲಾಧಿಕಾರಿ, ಬೆಳಗಾಂ | 1+10 | 1+10 | 01.07.2012 | 1,68,000/- |
| 15 | ಜಿಲ್ಲಾಧಿಕಾರಿ, ಚಾಮರಾಜನಗರ | 1+4 | 1+4 | 25.08.2012 | 73,856/- |
| 16 | ಜಿಲ್ಲಾಧಿಕಾರಿ, ಚಿಕ್ಕಮಗಳೂರು | 1+7 | 1+7 | 01.01.2013 | - |
| 17 | ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ | 1+6 | 1+6 | 17.01.2013 | - |
| 18 | ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ | 1+5 | 1+5 | 01.09.2012 | 71,602/- |
| 19 | ಜಿಲ್ಲಾಧಿಕಾರಿ, ಗದಗ | 1+5 | 1+5 | 24.12.2012 | - |
| 20 | ಜಿಲ್ಲಾಧಿಕಾರಿ, ಗುಲ್ಬರ್ಗಾ | 1+7 | 1+7 | 01.06.2012 | 2,69,671/- |
| 21 | ಜಿಲ್ಲಾಧಿಕಾರಿ, ಹಾಸನ | 1+8 | 1+8 | 01.11.2012 | - |
| 22 | ಜಿಲ್ಲಾಧಿಕಾರಿ, ಹಾವೇರಿ | 1+7 | 1+7 | 02.08.2012 | 2,07,604/- |
| 23 | ಜಿಲ್ಲಾಧಿಕಾರಿ, ಕೋಲಾರ | 1+5 | 1+5 | 12.10.2012 | - |
| 24 | ಜಿಲ್ಲಾಧಿಕಾರಿ, ಮಂಡ್ಯ | 1+7 | 1+7 | 09.07.2012 | 2,43,820/- |
| 25 | ಜಿಲ್ಲಾಧಿಕಾರಿ, ಮೈಸೂರು | 1+7 | 1+7 | 16.06.2012 | 1,09,400/- |
| 26 | ಜಿಲ್ಲಾಧಿಕಾರಿ, ರಾಯಚೂರು | 1+5 | 1+5 | 18.06.2012 | 2,57,926/- |
| 27 | ಜಿಲ್ಲಾಧಿಕಾರಿ, ರಾಮನಗರ | 1+4 | 1+4 | 15.11.2012 | - |
| 28 | ಜಿಲ್ಲಾಧಿಕಾರಿ, ಉಡುಪಿ | 1+3 | 1+3 | 25.09.2012 | - |
| 29 | ಜಿಲ್ಲಾಧಿಕಾರಿ, ಉತ್ತರಕನ್ನಡ | 1+11 | 1+11 | 01.06.2012 | 5,38,037/- |
| 30 | ಜಿಲ್ಲಾಧಿಕಾರಿ, ಬಳ್ಳಾರಿ | 1+7 | 1+7 | 07.11.2012 | - |
| ಒಟ್ಟು | 30+176 | 30+176 | 30+174 | - | 36,45,208/- |

(ಮೂವತ್ತಾರು ಲಕ್ಷದ ನಲವತ್ತೈದು ಸಾವಿರದ ಇನ್ನೂರ ಎಂಟು ರೂಪಾಯಿಗಳು ಮಾತ್ರ)

**ಟಿಪ್ಪಣಿ :** ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಾಜ್ಯದ 30 ಜಿಲ್ಲೆಗಳ 176 ತಾಲ್ಲೂಕುಗಳಲ್ಲಿ ಸ್ಥಾಪಿಸಬೇಕಾಗಿದ್ದು, ಪ್ರಸ್ತುತ ಏಪ್ರಿಲ್ 2012 ರಿಂದ ಈವರೆಗೆ 30 ಜಿಲ್ಲೆ ಮತ್ತು 174 ತಾಲ್ಲೂಕುಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಒಂದೊಂದು ತಾಲ್ಲೂಕುಗಳಲ್ಲಿಯೂ ವಿವಿಧ ದಿನಾಂಕ/ತಿಂಗಳುಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈಗಾಗಲೇ ಎಲ್ಲಾ ಜಿಲ್ಲೆಗಳಿಗೆ ಏಪ್ರಿಲ್ 2012 ರಿಂದ ಅರು ತಿಂಗಳ ಅವಧಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸಲಾದ ದಿನಾಂಕ/ತಿಂಗಳುಗಳಿಗನುಸಾರ ಹಾಗೂ ಅನುದಾನದ ಅವಶ್ಯಕತೆಯ ಕೋರಿಕೆಯ ಮೇರೆಗೆ ಮಾರ್ಚ್ 2013 ರ ಅಂತ್ಯದವರೆಗೆ ಅನುದಾನ ಮಂಜೂರಾತಿ ನೀಡಿದೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, "ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011" ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಾಜ್ಯದ 30 ಜಿಲ್ಲೆಗಳ 174 ತಾಲ್ಲೂಕುಗಳಲ್ಲಿ ಸ್ಥಾಪಿಸಲಾದ ಸಹಾಯವಾಣಿ ಕೇಂದ್ರಗಳ ಅವಧಿಯನ್ನು ಅಕ್ಟೋಬರ್ 2012 ರಿಂದ ಮಾರ್ಚ್ 2013 ರವರೆಗೆ ವಿಸ್ತರಿಸಲಾಗಿದೆ ಹಾಗೂ ಈ ಕೇಂದ್ರಗಳ ನಿರ್ವಹಣೆಗೆ ತಗುಲುವ ವೆಚ್ಚವನ್ನು ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸಿರುವ ದಿನಾಂಕ/ತಿಂಗಳುಗಳಿಗನುಸಾರವಾಗಿ ರಾಜ್ಯದ 30 ಜಿಲ್ಲೆಗಳ 174 ತಾಲ್ಲೂಕುಗಳಲ್ಲಿ ಅನುದಾನದ ಅವಶ್ಯಕತೆ ಇರುವ 15 ಜಿಲ್ಲೆಗಳಿಗೆ ಮಾತ್ರ ರೂ.36,45,208/- (ಮೂವತ್ತಾರು ಲಕ್ಷದ ನಲವತ್ತೈದು ಸಾವಿರದ ಇನ್ನೂರ ಎಂಟು ರೂಪಾಯಿಗಳು ಮಾತ್ರ) ಗಳನ್ನು ಜಿಲ್ಲಾಧಿಕಾರಿಗಳ ಕಛೇರಿಗೆ ಬಿಡುಗಡೆ ಮಾಡಿ ಆದೇಶಿಸಲಾಗಿದೆ.

ಸದರಿ ಆದೇಶವನ್ನು 2012-13 ನೇ ಸಾಲಿನ ಲೆಕ್ಕ ಶೀರ್ಷಿಕೆ 2052-00-090-0-26-051 (ಯೋಜನೇತರ) ಅಡಿಯಲ್ಲಿ ಒದಗಿಸಲಾಗಿರುವ ರೂ.15.00 ಕೋಟಿಗಳ ವೆಚ್ಚದಲ್ಲಿ ಭರಿಸತಕ್ಕದ್ದು ಮತ್ತು ಸಂಬಂಧಿಸಿದ ಇಲಾಖೆಯ ಅಧಿಕಾರಿಗೆ ಹಣ ಸೆಳೆಯುವ ಅಧಿಕಾರ ನೀಡಲಾಗಿದೆ.

ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸಲು ಹೊರಡಿಸಲಾಗಿದ್ದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು ಬಿಡುಗಡೆ ಆದ ಅನುದಾನವನ್ನು ಈ ಕೆಳಕಂಡಂತೆ ವಿನಿಯೋಗಿಸುವುದು (ಪ್ರತಿ ತಿಂಗಳ ವೆಚ್ಚ)

| ಲೇಖನ ಸಾಮಗ್ರಿ | ಸಿಬ್ಬಂದಿ ವೇತನ (ಗರಿಷ್ಠ ಇಬ್ಬರು) | ಒಟ್ಟು | ಷರಾ |
|---|---|---|---|
| ರೂ.2,000/-ಗಳು | ರೂ.10,000/-ಗಳು | ರೂ.12,000/- | ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸಿರುವ ದಿನಾಂಕ/ ತಿಂಗಳಿಗನುಸಾರ |

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 79 ವೆಚ್ಚ-12/2013, ದಿನಾಂಕ: 18/3/2013 ರ ಸಹಮತಿಯಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಿ.ಎ. ಗಾಯತ್ರಿ) 21/3/13
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ ಸುಧಾರಣೆ)
(ನಾಗರೀಕ ಸೇವೆಗಳು ಮತ್ತು ರಾಜಕೀಯ ವಿಶ್ರಾಂತಿ ವೇತನ-2)

ಇವರಿಗೆ :

1. ಕರ್ನಾಟಕ ಮಹಾಲೇಖಪಾಲರು, (ಲೆಕ್ಕಪತ್ರ)/(ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಬಿ ಅಂಡ್ ಆರ್), ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ) ಹಾಗೂ ಮಿಷನ್ ನಿರ್ದೇಶಕರು, ಸಕಾಲ ಮಂಡಳಿ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು / ಎಲ್ಲಾ ಜಿಲ್ಲೆಯ ಖಜಾನಾಧಿಕಾರಿಗಳು

6. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು.
7. ನಿರ್ದೇಶಕರು, ಜಿಲ್ಲಾ ಖಜಾನೆ, ಬೆಂಗಳೂರು.
8. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
9. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ. ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು
10. ಅಪರ ಮಿಷನ್ ನಿರ್ದೇಶಕರು, ಸಕಾಲ ಮಂಡಳಿ, ಸಿಆಸುಇ (ಆಸು) ವಿಶ್ವೇಶ್ವರಯ್ಯ ದೊಡ್ಡ ಗೋಪುರ, 20ನೇ ಮಹಡಿ, ಬೆಂಗಳೂರು.
11. ಆಡಳಿತಾಧಿಕಾರಿ, ಸಕಾಲ ಮಂಡಳಿ, ಸಿಆಸುಇ (ಆಸು), ಬೆಂಗಳೂರು.
12. ಸರ್ಕಾರದ ಉಪ ಕಾರ್ಯದರ್ಶಿ, ಸಿಆಸುಇ (ಆಸು) ರವರ ಆಪ್ತ ಸಹಾಯಕರು
13. ಹೆಚ್ಚುವರಿ ಪ್ರತಿಗಳು/ಶಾಖಾ ರಕ್ಷಾ ಕಡತ.